ಮೈಸೂರು ವಿಧಾನಸಭೆ

MYSORE LEGISLATIVE ASSEMBLY

Thursday, 15th March, 1973/ Phlguana 24, 1894 S.E.

The House met in the Assembly Chamber, Vidhana Soudha, at one of the Clock.

MADAM SPEKER [SMT. K. S. NAGARATHNAMMA] in the Chair.

STARRED QUESTIONS

(t0 which oral answers were given)

Allotment of iron and Steel to Mysore State

29. Sri B. SATHYANARAYANA SINGH (Hospet).—

Will the Minister for Industries be pleased to state.—

(*a*) the quantity of iron and steel allotted to Mysore State ;

(*b*) the total Number of small scale industries in the whole State making use of Iron and Steel as raw material ;

(*c*) the quntity of iron and steel alloted to other States by the Government of India;

(*d*) whether it is a fact that considering the number of units working and using iron and steel as raw material the quota alloted to Mysore State by Government of India is considerably less.

(*e*) whether it is a fact that some States which are enjoying greater quota now are preventing Government of India from re-alloting the entire quota on the basis of the number of existing working of small scale industries units;

(*f*) whether the Government of India have been repeatedly impressing upon the State Government to furnish all particulars regarding the existing units ;

(*g*) if so,the arrangements the State Government has made for collecting data thoroughly regarding the existing and unregistered small scale units ?

(SRI B. SATHYANARAYANA SINGH)

Sri S. M. KRISHNA (Minister for Industries).—

(*a*) 11.673 metric tonnes of steel during the year 1971-72, under the small Scale Industries' quota.

(*b*) There are 3,873 registered Small Scale Industrial units using Iron and Steel materials,

(*c*) Information is not available.

(*d*) Yes.

(*e*) Government of India have not agreed to our request to make Statewise allocations on the basis of the number of registered small scale units consuming iron and steel.

(*f*) No.

(*g*) Efforts are being made continnously to maintain up-to-date data.

ಶ್ರೀ ಬಿ. ಸತ್ಯನಾರಾಯಣ ಸಿಂಗ್ .—ತಾವು (ಇ) ಗೆ ಉತ್ತರವಾಗಿ ಈ ರೀತಿ ಹೇಳಿದ್ದೀರಿ 'Govenment of India have not agreed to our request to make State-wise allocations on the basis of the number of registered small scale units consuming iron and steel" ಎಂದು. ಹಾಗಾದರೆ ಯಾವ ಆಧಾರದ ಮೇಲೆ ಗವರ್ನ್ಮೆಂಟ್ ಆಫ್ ಇಂಡಿಯಾದವರು ಈ ಕಬ್ಬಿಣ ಹಾಗೂ ಉಕ್ಕಿನ ಕೋಟಾವನ್ನು ಅಲಾಟ್ ಮಾಡುತ್ತಿದ್ದಾರೆ ಎಂಬುದನ್ನು ತಿಳಿಸುತ್ತೀರಾ ?

† ಎಸ್. ಎಂ. ಕೃಷ್ಣ.—ಈ ಬಗ್ಗೆ ಹಿಂದೆ ಒಂದು ತೀರ್ಮಾನವನ್ನು ತೆಗೆದುಕೊಂಡಿದ್ದರು. ಅದು ಏನೆಂದರೆ ಸ್ಕಾಚ್ಯುಟರಿ ಸ್ಟೀಲ್ ಕಂಟ್ರೋಲ್ ಬರುವುದಕ್ಕೆ ಹಿಂದಿನ 2 ವರ್ಷದಲ್ಲಿ ಯಾವ ಯಾವ ರಾಜ್ಯದವರು ಎಷ್ಟೆಷ್ಟು ಕಬ್ಬಿಣವನ್ನು ಸಣ್ಣ ಕೈಗಾರಿಕೆಗಳಿಗೋಸ್ಕರ ಪಡೆದು ಕೊಂಡಿದ್ದರು ಅವರೇಜ್ ಆಧಾರದ ಮೇಲೆ 1968ನೇ ಇಸವಿಯಿಂದ ಅಲೋಕೇಷನ್ ಆಫ್ ಇಂಡಿಪೆಜ್ಯುಯಲ್ಲಿ ಸ್ಟೇಟ್ಸ್ ಅದನ್ನು ಫಿಕ್ಸ್ ಮಾಡಿದರು. ಅದಾದನಂತರ ನಾವು ಮೈಸೂರಿನಲ್ಲಿ 2-3 ಬಾರಿ ಇದು ಪುನರ್ಪರಿಶೀಲನೆ ಆಗಬೇಕು, ಇದು ಯೋಗ್ಯವಾದುದಲ್ಲ ಎಂದು ಒತ್ತಾಯ ಮಾಡುತ್ತಿದ್ದೇವೆ. ಮತ್ತು 1966-67 ಮತ್ತು 1967-68 ನೇ ಇಸವಿಯಲ್ಲಿ ಮೈಸೂರು ರಾಜ್ಯದಲ್ಲಿ ಈ ವಿಷಯಕ್ಕೆ ಅಭಾವ ಇದ್ದುದರಿಂದ ಅನೇಕ ಸಣ್ಣ ಕೈಗಾರಿಕೆಗಳು ನಮ್ಮಲ್ಲಿ ಬರುವುದಕ್ಕೆ ಆಗಲಿಲ್ಲ. ಅಲ್ಲದೆ ಪ್ರತಿಯೊಂದು ರಾಜ್ಯದಲ್ಲೂ ಸಣ್ಣ ಕೈಗಾರಿಕೆಗಳ ಸಂಖ್ಯೆ ಏನು ಇದೆಯೋ ಅವು ಎಷ್ಟೆಷ್ಟು ಕೋಟಾವನ್ನು ಉಪಯೋಗಿಸುತ್ತಿವೆ ಎನ್ನುವುದರ ಬಗ್ಗೆ ಪುನರ್ಪರಿಶೀಲನೆ ಮಾಡಬೇಕೆಂದು ಪದೇ ಪದೇ ನಾವು ಕೇಂದ್ರ ಸರ್ಕಾರವನ್ನು ಒತ್ತಾಯ ಮಾಡುತ್ತಿದ್ದರೂ ಕೂಡ ಇಂದಿನವರೆಗೂ ಅದು ಫಲಿಸಲಿಲ್ಲ.

ಶ್ರೀ ಬಿ. ಸತ್ಯನಾರಾಯಣ ಸಿಂಗ್.—ಸ್ವಾಮಿ, ಸಣ್ಣ ಕೈಗಾರಿಕೆಗಳ ಬಗ್ಗೆ ಏನೇನಾಗಿದೆ; ಏನು ಎನ್ನುವುದರ ಬಗ್ಗೆ ತಾವು ಈಗತಾನೇ ಹೇಳಿದಿರಿ. ಆದರೆ ನಮ್ಮ ರಾಜ್ಯಕ್ಕೂ ಮತ್ತು ಗುಜರಾತ್ ಮತ್ತು ರಾಜಾಸ್ಥಾನಕ್ಕೂ ಹೋಲಿಸಿ ನೋಡಿದರೆ ಅಲ್ಲಿ ಕೆಲಸ ಮಾಡುತ್ತಿರುವ ಸಣ್ಣ ಪ್ರಮಾಣದ ಕೈಗಾರಿಕೆಗಳಿಗೆ ಸ್ಟೀಲ್ ಕೋಟಾವನ್ನು ಜಾಸ್ತಿ ಮಾಡಿರುವುದು ನೋಡಿದರೆ ನಮ್ಮ ರಾಜ್ಯಕ್ಕಿಂತ 3 ಪಟ್ಟು ಜಾಸ್ತಿಯಾಗಿದೆ. ಇದು ಬಹಳ ಅನ್ಯಾಯ, ಅದುದರಿಂದ ಇದನ್ನು ತಡೆಗಟ್ಟಲಿಕ್ಕೆ ಏನಾದರೂ ಒಂದು ಕಾರ್ಯಕ್ರಮ ಹಾಕಿಕೊಂಡಿದ್ದೀರಾ ? ಅಲ್ಲದೆ ನಮ್ಮ ರಾಜ್ಯಕ್ಕೆ ಹೆಚ್ಚು ಸ್ಟೀಲ್ ಕೋಟಾ ಬರುವುದಕ್ಕೆ ತಾವು ಏನು ಪ್ರಯತ್ನ ಮಾಡುತ್ತಿದ್ದೀರಿ ಎನ್ನುವುದನ್ನು ತಿಳಿಸುತ್ತೀರಾ ?

ಶ್ರೀ ಎಸ್. ಎಂ. ಕೃಷ್ಣ.—1971 ನೇ ಇಸವಿಯಲ್ಲಿ ಅಫಿಷಿಯಲ್ ಲೆವಲ್‌ನಲ್ಲಿ ಒಂದು ಕಮಿಟಿ ರಚನೆ ಮಾಡಿದರು. ಸೆಂಟ್ರಲ್ ಮಿನಿಸ್ಟ್ರಿ ಆಫ್ ಇಂಡಸ್ಟ್ರಿಯಲ್ ಡೆವಲಪ್‌ಮೆಂಟ್ ಅವರು ಈ ಬಗ್ಗೆ ಒಂದು ಆಲೋಚನೆ ಮಾಡಿದರು. ಅದು ಏನೆಂದರೆ ಪ್ರತಿಯೊಂದು ರಾಜ್ಯದಲ್ಲೂ ಸಣ್ಣ ಪ್ರಮಾಣದ ಕೈಗಾರಿಕೆಗಳು ಏನು ಇವೆ ಅವುಗಳ ಬಗ್ಗೆ ಒಂದು ವಿವರವಾದ ಮಾಹಿತಿಯನ್ನು ಸಂಗ್ರಹಿಸಬೇಕು

†Indicates that the remarks or speeches have not been revised by the member concerned.

ಎಂದು ತೀರ್ಮಾನ ಮಾಡಿದರು. ಆದರೆ ಆ ತೀರ್ಮಾನ ಇದುವರೆಗೂ ಕೂಡ ಕಾರ್ಯಗತವಾಗಲಿಲ್ಲ. ಮೈಸೂರು ರಾಜ್ಯದಲ್ಲಿ ಇಲ್ಲಿಯವರೆಗೂ ಕೂಡ ಕಬ್ಬಿಣದ ಕೊರತೆ ಇದೆ ಎಂದು ಹೇಳುತ್ತಿದ್ದೇವೆ. ಅವರು ಎಲ್ಲಿಯವರೆಗೆ ಈ ಬಗ್ಗೆ ಒಂದು ವಿವರವಾದ ಅಂಕಿಅಂಶಗಳನ್ನು ಸಂಗ್ರಹಿಸುವುದಿಲ್ಲವೋ ಅಲ್ಲಿಯವರೆಗೂ ಇದು ಕಾರ್ಯಗತವಾಗುವುದಿಲ್ಲ. ಆದುದರಿಂದ ಈ ಬಗ್ಗೆ ಅದನ್ನು ಕೈ ಬಿಟ್ಟಿದ್ದೇವೆ.

ಶ್ರೀ ಆರ್. ಎಸ್. ಪಾಟೀಲ್.—ಸ್ವಾಮಿ ತಾವು ಈ ಸಣ್ಣ ಪ್ರಮಾಣದ ಕೈಗಾರಿಕೆಗಳ ಬಗ್ಗೆ ಮತ್ತು ಸರ್ಕಾರದ ಅವಶ್ಯಕತೆಗಳ ಬಗ್ಗೆ ಗಮನದಲ್ಲಿಟ್ಟುಕೊಂಡು ಇದನ್ನು ಪುನರ್ವಿಮರ್ಶೆ ಮಾಡಬೇಕೆಂದು ಕೇಂದ್ರ ಸರ್ಕಾರವನ್ನು ಕೇಳಿದ್ದೇವೆ ಎಂದು ಹೇಳಿದಿರಿ. ಈ ಬಗ್ಗೆ ನಾನು ಹೇಳುವುದೇನೆಂದರೆ ತಾವು ಯಾವ ರೀತಿಯಾಗಿ ಈ ಕೈಗಾರಿಕೆಗಳ ಬಗ್ಗೆ ಆನಕ್ಕೆ ಇಟ್ಟುಕೊಂಡಿದ್ದೀರೋ ಅದೇರೀತಿಯಾಗಿ ವ್ಯಕ್ತಿಗಳಿಗೆ ತಮಗೆ ಬೇಕಾದ ಕಬ್ಬಿಣ ಹಾಗೂ ಉಕ್ಕಿನ ಕೊರತೆಯನ್ನು ಪೂರೈಸುವುದನ್ನು ಗಮನದಲ್ಲಿಟ್ಟುಕೊಂಡು ಕೇಂದ್ರ ಸರ್ಕಾರಕ್ಕೆ ಮನವಿ ಮಾಡಿಕೊಂಡಿದ್ದೀರಾ ?

ಶ್ರೀ ಎಸ್. ಎಂ. ಕೃಷ್ಣ.—ತಾವು ಈ ಸಣ್ಣ ಪ್ರಮಾಣದ ಕೈಗಾರಿಕೆಗಳ ಬಗ್ಗೆ ಕೊಡುತ್ತಿರುವ ಕೋಟಾದ ಬಗ್ಗೆ ಕೇಳಿರುವುದರಿಂದ ಆ ಬಗ್ಗೆ ಉತ್ತರ ಹೇಳಿದ್ದೇನೆ. ಆದರೆ ಅಗ್ರಿಕರ್‌ಚರ್ ಪರ್‌ಪಸ್‌ಗಾಗಲಿ, ಡೊಮೆಸ್ಟಿಕ್ ಪರ್ಪಸ್‌ಗಾಗಲಿ ಕೊಡುವ ಕೋಟಾದ ಪ್ರಶ್ನೆ ಈ ಉತ್ತರದಲ್ಲಿ ಬರುವುದಿಲ್ಲ, ಅದಕ್ಕೆ ಕೊಡುವುದು ಬೇರೆ ವಿಧಾನವಿದೆ. ಆದುದರಿಂದ ಆ ಪ್ರಶ್ನೆ ಇದರಲ್ಲಿ ಬರುವುದಿಲ್ಲ.

ಶ್ರೀ ಸಿ. ಬೈರೇಗೌಡ.—ಸ್ವಾಮಿ, ಈ ರಾಜ್ಯಕ್ಕೆ ಪದೇ ಪದೇ ಕೇಂದ್ರ ಸರ್ಕಾರದಿಂದ ಅನ್ಯಾಯವಾಗುತ್ತಿದೆ. ಆದುದರಿಂದ ಈ ಕಬ್ಬಿಣ ಹಾಗೂ ಉಕ್ಕಿನ ಅಭಾವವನ್ನು ಪೂರೈಸುವುದಕ್ಕೆ ಕೇಂದ್ರ ಸರ್ಕಾರ ಮೇಲೆ ಈ ಬಗ್ಗೆ ಏನಾದರೂ ಒಂದು ಪರಿಣಾಮಕಾರಿಯಾದ ಕಾರ್ಯಕ್ರಮವನ್ನು ಕೈಗೊಳ್ಳುವುದಕ್ಕೆ ತಯಾರಾಗಿದ್ದೀರಾ?

ಶ್ರೀ ಎಸ್. ಎಂ. ಕೃಷ್ಣ.—ಕೇಂದ್ರ ಸರ್ಕಾರದಿಂದ ಪದೇ ಪದೇ ಅನ್ಯಾಯವಾಗುತ್ತಿದೆ. ಎನ್ನುವ ಪ್ರಶ್ನೆ ಈ ಪ್ರಶ್ನೆಯ ವ್ಯಾಪ್ತಿಯಲ್ಲಿ ಒಳಪಡುವಂಥ ಪ್ರಶ್ನೆ ಅಲ್ಲ. ಇಷ್ಟು ಮಾತ್ರ ನಾನು ಒಪ್ಪಲಿಕ್ಕೆ ತಯಾರಾಗಿದ್ದೇನೆ. ನಮ್ಮ ರಾಜ್ಯದಲ್ಲಿರತಕ್ಕಂಥ ಸಣ್ಣ ಪ್ರಮಾಣದ ಕೈಗಾರಿಕೆಗಳು ಏನು ಇವೆಯೋ ಅದರ ಕೆಪಾಸಿಟಿಗೆ ಅನುಗುಣವಾಗಿ ಸಾಕಷ್ಟು ಸಿಕ್ಕುತ್ತಾ ಇಲ್ಲ. ಅದಕ್ಕಾಗಿ ಆಗಿಂದಾಗೆ ಅದರ ಬಗ್ಗೆ ಪ್ರಯತ್ನಗಳು ನಡೆಯುತ್ತಾ ಇವೆ.

ಶ್ರೀ ಹೆಚ್. ಎಸ್. ಸಿದ್ದಪ್ಪ.—ಸ್ವಾಮಿ, ಸ್ಟೀಲ್ ಕೋಟಾ ಅಲಾಟ್ ಮಾಡುವುದರಲ್ಲಿ ನಮ್ಮ ಸರ್ಕಾರ ಏನು ವಿಚಾರನು ಮಾಡುತ್ತಿದ್ದಾರೆ ಅದರಲ್ಲಿ ಬಹು ಜನ ಏನು ಮಾಡುತ್ತಿದ್ದಾರೆ ಎಂದರೆ ಬ್ಲಾಕ್ ಮಾರ್ಕೆಟ್‌ನಲ್ಲಿ ಮಾರುತ್ತಿದ್ದಾರೆ. ಯಾವುದೋ ಒಂದು ಕೈಗಾರಿಕೆಗೆ ಮಂಜೂರು ಮಾಡಿದರೆ ಆ ಕೋಟಾ ಇನ್ನೊಬ್ಬರಿಗೆ ಯಾರಿಗೋ ಬ್ಲಾಕ್ ಮಾರ್ಕೆಟ್ಟಿನಲ್ಲಿ ಮಾರುತ್ತಾರೆ. ಅದರ ಮೇಲೆ ತನಿಖೆ ನಡೆಸಿ ಸೂಕ್ತ ಕಾರ್ಯಕ್ರಮ ತೆಗೆದುಕೊಳ್ಳುತ್ತೀರಾ?

ಶ್ರೀ ಎಸ್. ಎಂ. ಕೃಷ್ಣ.—ಮಾನ್ಯ ಸದಸ್ಯರು ಹೇಳಿದ ಸಲಹೆಯನ್ನು ಗಮನಿಸುತ್ತೇನೆ.

ಶ್ರೀ ಬಿ. ಸತ್ಯನಾರಾಯಣ ಸಿಂಗ್.—ಸ್ವಾಮಿ, ಈ ಸಣ್ಣ ಪ್ರಮಾಣದ ಕೈಗಾರಿಕೆಗಳ ಬಗ್ಗೆ ಏನು ಪ್ರಯತ್ನ ಮಾಡುತ್ತಿದ್ದೇವೆ ಎನ್ನುವುದರ ಬಗ್ಗೆ ಈಗತಾನೇ ಹೇಳಿದಿರಿ. ನಾನು ಹೇಳುವುದು ಏನೆಂದರೆ ಈಗ ನಮ್ಮ ರಾಜ್ಯದಲ್ಲಿ ಸಣ್ಣ ಪ್ರಮಾಣದ ಕೈಗಾರಿಕೆಗಳು ಜಾಸ್ತಿಯಾಗಿರುವುದರಿಂದ ಈಗ ಕೊಡುತ್ತಿರುವ ಕೋಟಾ ಅಲ್ಲದೆ ಇನ್ನೂ ಹೆಚ್ಚಾಗಿ ಅಡಿಷನಲ್ ಕೋಟಾವನ್ನು ತರಿಸುವುದಕ್ಕೆ ಪ್ರಯತ್ನ ಮಾಡುತ್ತೀರಾ ?

ಶ್ರೀ ಎಸ್. ಎಂ. ಕೃಷ್ಣ.—ಪ್ರಯತ್ನ ಮಾಡುತ್ತೇನೆ.

Roads, Tanks and School Buildings in Villages of Davanagere Taluk

41 Smt. C. NAGAMMA KESHAVAMURTHY (Davangere).—

Will the Minister for Community Development and Social Welfare be pleased to state :—

(*a*) the names of the villages in Davanagere Taluk that have no roads even to this day ;